ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)
ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ ರವರ ಕಛೇರಿ
3ನೇ ಮಹಡಿ, ಬಿ ಬ್ಲಾಕ್, ವಾಣಿಜ್ಯ ತೆರಿಗೆಗಳ ಕಾರ್ಯಾಲಯ-2
ಕೋರಮಂಗಲ, ಬೆಂಗಳೂರು-560047 ದೂರವಾಣಿ ಸಂಖ್ಯೆ: 080-25704972. ಮೊ: 9449981125

ಸಂಖ್ಯೆ: ವಾತೆಅ/ಜಾರಿ-09/ದವ/ ಅಡಿಕೆ ಹರಾಜು/ಚಿತ್ರದುರ್ಗ/2019-20. ದಿನಾಂಕ :26-04-2019

# ಅಡಿಕೆ ಹರಾಜು ಪ್ರಕಟಣೆ

ಸರ್ಕಾರಕ್ಕೆ ತೆರಿಗೆಯನ್ನು ವಂಚಿಸಿ ಭೀಮಸಮುದ್ರ, ಚಿತ್ರದುರ್ಗ ಜಿಲ್ಲೆಯಿಂದ ಉತ್ತರ ಭಾರತಕ್ಕೆ ಸಾಗಿಸುತ್ತಿದ್ದ 18200 ಕೆ.ಜಿ (260 ಗೋಣಿಚೀಲ) ಅಡಿಕೆಯನ್ನು ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017ರ ಅಧಿನಿಯಮ 130ರ ಅಡಿಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯು ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಸರಕನ್ನು 'ಹೇಗೆ ಇವೆಯೋ ಹಾಗೆಯೇ' ದಿ: 06-05-2019 ರಂದು ಬೆಳಿಗ್ಗೆ 11-00 ರಿಂದ ಮದ್ಯಾಹ್ನ 4-00 ಗಂಟೆಯವರೆಗೆ ಎಪಿಎಂಸಿ ಯಾರ್ಡ್, ಚಿತ್ರದುರ್ಗ ಇಲ್ಲಿ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಇಲಾಖೆಯು ಉದ್ದೇಶಿಸಿದ್ದು, ಆಸಕ್ತಿವುಳ್ಳ ಖರೀದಿದಾರರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಬಿಡ್ಡನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.

<u>ಷರತ್ತುಗಳು:</u>

1) ಮುಟ್ಟುಗೋಲು ಹಾಕಿಕೊಂಡಿರುವ ಅಡಿಕೆಯನ್ನು ಟಿ.ಎಸ್.ಪಿ ಗೋದಾಮು, ಸಂಖ್ಯೆ: 2, ಎಪಿಎಂಸಿ ಯಾರ್ಡ್, ಚಿತ್ರದುರ್ಗ, ಇಲ್ಲಿ ದಾಸ್ತಾನು ಮಾಡಲಾಗಿದ್ದು, ಆಸಕ್ತಿವುಳ್ಳ ಖರೀದಿದಾರರು ದಿ: 30-04-2019 ರಂದು ಸಮಯ ಬೆಳಿಗ್ಗೆ 11-00 ರಿಂದ ಮದ್ಯಾಹ್ನ 4-00 ಗಂಟೆಯವರೆಗೆ ಸದರಿ ಸರಕುಗಳನ್ನು ಪರಿಶೀಲಿಸಬೇಕು.
2) ಆಸಕ್ತಿವುಳ್ಳ ಖರೀದಿದಾರರು ತಮ್ಮ ಬಿಡ್ಡನ್ನು **ಸೀಲು** ಮಾಡಿದ ಲಕೋಟೆಯೊಂದಿಗೆ ದಿ:04-05-2019 ರೊಳಗಾಗಿ ವಾಣಿಜ್ಯ ತೆರಿಗೆ ಅಪರ ಆಯುಕ್ತರು(ಜಾರಿ), ದಕ್ಷಿಣ ವಲಯ, ಕೋರಮಂಗಲ, ಬೆಂಗಳೂರು ರವರ ಕಛೇರಿಗೆ ನೊಂದಣಿ ಅಂಚೆ ಮೂಲಕ ಅಥವಾ ವೈಯಕ್ತಿಕವಾಗಿ ತಲುಪಿಸಬೇಕು.
3) ಆಸಕ್ತಿವುಳ್ಳ ಖರೀದಿದಾರರು ರೂ. 1,00,000-00 (ಒಂದು ಲಕ್ಷ) ಮೌಲ್ಯದ ಇಎಂಡಿ ಮೊತ್ತವನ್ನು "ವಾಣಿಜ್ಯ ತೆರಿಗೆ ಅಧಿಕಾರಿ(ಜಾರಿ)-09, ದಕ್ಷಿಣ ವಲಯ, ಬೆಂಗಳೂರು ರವರ ಹೆಸರಿನಲ್ಲಿ ಡಿಡಿ ಅಥವಾ ಪೇ ಆರ್ಡರ್ ಮೂಲಕ ಪಡೆದು ಸೀಲು ಮಾಡಿದ ಬಿಡ್ಡು ಲಕೋಟೆಯ ಜೊತೆಗೆ ದಿ:04-05-2019ರೊಳಗೆ ತಲುಪಿಸಬೇಕು.
4) ಬಿಡ್ಡನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ವಾಣಿಜ್ಯ ತೆರಿಗೆ ಅಧಿಕಾರಿ(ಜಾರಿ)-09, ದಕ್ಷಿಣ ವಲಯ, ಬೆಂಗಳೂರು ರವರು ಹೊಂದಿರುತ್ತಾರೆ.
5) ಯಶಸ್ವಿಯಾದ ಬಿಡ್ಡುದಾರರು ಬಿಡ್ ಹಣವನ್ನು 7 ದಿನಗಳೊಳಗಾಗಿ ತಾತ್ಕಲಿಕ ನೊಂದಣಿ ಪಡೆದು ಇ-ಪಾವತಿ ಮುಖಾಂತರ ಜಿ.ಎಸ್.ಟಿ. ಲೆಕ್ಕಕ್ಕೆ ಪಾವತಿಸಬೇಕು ಮತ್ತು ಸದರಿ ಖರೀದಿಯನ್ನು ಅನೊಂದಾಯಿತ ಖರೀದಿಯೆಂದು ಪರಿಗಣಿಸಬೇಕು. ನಿಗದಿತ 7 ದಿನಗಳೊಳಗಾಗಿ ಪೂರ್ತಿ ಬಿಡ್ಡು ಹಣವನ್ನು ಪಾವತಿ ಮಾಡದ ಪಕ್ಷದಲ್ಲಿ ಇಎಂಡಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
6) ಪೂರ್ತಿ ಬಿಡ್ ಮೊತ್ತವನ್ನು ಪಾವತಿಸಿದ ನಂತರವೇ ಸರಕನ್ನು 'ಹೇಗೆ ಇವೆಯೋ ಹಾಗೆಯೇ' ಹಸ್ತಾಂತರಿಸಲಾಗುವುದು.
7) ಯಶಸ್ವಿಯಾದ ಬಿಡ್ಡುದಾರರು ಸದರಿ ಸರಕಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆಯಡಿಯಲ್ಲಿ ಅನ್ವಯಿಸುವ ಸೆಸ್ ಹಾಗೂ ಇತರೆ ಭಾದ್ಯತೆಗಳಿಗೆ ಒಳಪಡಬೇಕಾಗುತ್ತದೆ.

ವಾಣಿಜ್ಯ ತೆರಿಗೆ ಅಧಿಕಾರಿ(ಜಾರಿ)-09,
ದಕ್ಷಿಣ ವಲಯ, ಕೋರಮಂಗಲ, ಬೆಂಗಳೂರು

ವಾಣಿಜ್ಯ ತೆರಿಗೆ ಅಧಿಕಾರಿ
(ಜಾರಿ), ದಕ್ಷಿಣ ವಲಯ-9
ಬೆಂಗಳೂರು-47